ವರೆಗೆ ತೀರ್ಮಾನವಾದ ೨ ಲಕ್ಷ ಒಕ್ಕಲುಗಳಿಗೆ ಅನ್ವಯವಾಗುತ್ತದೆ. ಎಲ್ಲಾ ಕೇಸುಗಳು ತೀರ್ಮಾನವಾದರೆ ೩.೫ ಲಕ್ಷ ಒಕ್ಕಲುಗಳಾಗುತ್ತವೆ. ಈಗ ೧೦೦ ರೂಪಾಯಿ ತೆಗೆದುಕೊಂಡು ಸರ್ಟಿಫಿಕೇಟ್ ಕೊಡಬೇಕು, ಉಳಿದ ಹಣವನ್ನು ಒಂದೇ ಸಾರಿ ಕೊಟ್ಟರೂ ಸ್ವೀಕಾರ ಮಾಡುತ್ತೇವೆ, ಅಥವಾ ೨೦ ಸಮ ಕಂತುಗಳಲ್ಲಿ ಕೊಟ್ಟರೂ ಸ್ವೀಕಾರ ಮಾಡುತ್ತೇವೆ. ಎಲ್ಲಾ ಕೇಸುಗಳು ತೀರ್ಮಾನವಾದರೆ ೩.೫ ಲಕ್ಷ ಜನರಿಗೆ ಅನುಕೂಲವಾಗುತ್ತದೆ. ಇಷ್ಟರವರೆಗೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಒಕ್ಕಲುಗಳಿಗೆ ಪಟ್ಟಕೊಟ್ಟಿದ್ದಾರೆ. ಅವರಿಗೆ ಈ ಪ್ರಶ್ನೆ ಅನ್ವಯವಾಗುವುದಿಲ್ಲ. ಕೆಲವರು ಒಂದೇ ಸಾರಿ ಕೊಟ್ಟಿದ್ದಾರೆ, ಮತ್ತೆ ಕೆಲವರು ಕಂತುಗಳಲ್ಲಿ ಕೊಟ್ಟಿದ್ದಾರೆ. ಇಷ್ಟರವರೆಗೆ ಸಾಲ ತೆಗೆದುಕೊಂಡವರಿಗೆ ಇದು ಅನ್ವಯವಾಗುವುದಿಲ್ಲ. ೧೦೦ ರೂಪಾಯಿ ತೆಗೆದುಕೊಂಡು ಉಳಿದ ಪರಿಹಾರ ಧನ ವಿನಾಯಿತಿ ಮಾಡುವಂಥ ಪ್ರಶ್ನೆಯೇ ಇಲ್ಲ. ಹಿಂದಿನ ಸರ್ಕಾರ ಔದಾರ್ಯ ತೋರಿಸಿಲ್ಲ. ಆ ರೀತಿ ನಾವು ಚಿಂತನೆ ಮಾಡುತ್ತಾ ಇಲ್ಲ. ಮೊದಲು ೧೦೦ ರೂಪಾಯಿ ತೆಗೆದುಕೊಳ್ಳುತ್ತೇವೆ, ತಮ್ಮೇಲೆ ಉಳಿದ ಹಣ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಮಾನ್ಯ ಅರ್ಥ ಮಂತ್ರಿಗಳು ಗೇಣಿದಾರರ ವಿಚಾರವನ್ನು ಅರಿತವರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರೂ ಕೂಡ ವಿನಾಯಿತಿ ಕೊಡಬೇಕು ಎನ್ನತಕ್ಕ ಅಭಿಪ್ರಾಯವನ್ನು ಹೊಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದೇ ಹೋದರೆ ರೈತರು ಇನ್ನೂ ಸಾಲದಲ್ಲಿ ಬೀಳುತ್ತಾರೆ, ಮತ್ತು ತನ್ನದಾಗಿ ಜಮೀನನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಜಮೀನನ್ನು ಅಭಿವೃದ್ಧಿ ಮಾಡುವಂಥ ಚೈತನ್ಯ ೨೦ ವರ್ಷಗಳಾದರೂ ಬರುವುದಿಲ್ಲ. ಒಂದು ಕಂತನ್ನೂ ಕೂಡ ಕೊಡುವುದಕ್ಕೆ ಶೇಕಡ ೭೫ ರಷ್ಟು ಜನಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂದಿನ ಸರಕಾರದವರು ಹೇಗಾದರೂ ಇರಲಿ, ತಾವು ಗೇಣಿದಾರರ ಸಮಸ್ಯೆ ಅರಿತರು, ತಾವು ಒಂದು ಆಶ್ವಾಸನೆ ಕೊಟ್ಟುಬಿಡಿ; ಹೋಗಲಿ. ಶೋಷಿತ ವರ್ಗದ ಬಗ್ಗೆ ರೈತರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಇವರಿಗೆ ಪುಗಸೆಟ್ಟೆ ಖಾತೆ ಹಕ್ಕು ಕೊಡುವಂಥ ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನತಕ್ಕ ಆಶ್ವಾಸನೆ ಕೊಡಿ ಎಂದು ತಮ್ಮ ಮೂಲಕ ಮಾನ್ಯ ಅರ್ಥ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವುದೇ ಹಣ ಕೊಡದೆ ಮುಫತ್ತಾಗಿ ಜಮೀನನ್ನು ಕೊಡಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಾ ಇದ್ದಾರೆ. ಆದರೆ ಈಗಿನ ಸರ್ಕಾರದ ನೀತಿ ಹಾಗಲ್ಲ. ೧೦೦ ರೂಪಾಯಿ ತೆಗೆದುಕೊಳ್ಳುವುದು, ಉಳಿದ ಹಣ ೨೦ ಕಂತುಗಳಲ್ಲಿ ಕೊಡಬೇಕಾಗುತ್ತದೆ. ಏಕೆಂದರೆ, ಭೂಮಿಯನ್ನು ತೆಗೆದುಕೊಂಡ ಮೇಲೆ ಆದರಲ್ಲಿ ಹೆಚ್ಚು ಕಲಸಮಾಡುವಂಥ ಇನಿಷಿಯೇಟೀವ್ ಅವರ ಹತ್ತಿರ ಇರಬೇಕು ಎನ್ನುವ ಉದ್ದೇಶದಿಂದಲೇ ಈ ಪ್ರೊತ್ಸವನ್ನು ನಿಗದಿಮಾಡಿದೆ. ಇದನ್ನು ತೆಗೆದು ಬಿಡಬೇಕು, ಮುಫತ್ತಾಗಿ ಭೂಮಿಯನ್ನು ಕೊಡಬೇಕು ಎನ್ನತಕ್ಕ ಔದಾರ್ಯ ಬಹಳ ನಿಧಾನವಾಗಿ ಮಾನ್ಯ ಸದಸ್ಯರಿಗೆ ಬಂದ ಹಾಗೆ ಇದೆ. ಸಣ್ಣ ರೈತರ ಬಗ್ಗೆ ನಮ್ಮ ಸರ್ಕಾರಕ್ಕೆ ಹೆಚ್ಚಿನ ಆತಂಕ ಇದೆ. ಅವರಿಗೆ ಸಾಕಷ್ಟು ಪರಿಹಾರ ಕೊಡಬೇಕು ಎನ್ನುವುದರಲ್ಲಿ ಬೇರೆ ಬೇರೆ ವಿಧದಲ್ಲಿ ಯೋಜನೆ ಸರ್ಕಾರ ಹಾಕಿಕೊಂಡಿದೆ. ಆದರೆ ಈ ದಿಶೆಯಲ್ಲಿ ಪೂರ್ತಿ ವಿನಾಯಿತಿ ಮಾಡುವುದು ಸರ್ಕಾರದ ಉದ್ದೇಶವಲ್ಲ.

Private High Schools in the State

261 SRI M. SRINIVAS (Srirangapatna).—Will the Minister for Education be pleased to state :—

(a) the number of Private High Schools started during 1978-79 in the state ;

(b) how many of them are run by SC and ST managements ?

SRI G. B. SHANKARA RAO (Minister for Education).—

(a) 40

(b) 3

ಶ್ರೀ ಎಂ. ಶ್ರೀನಿವಾಸ.—ಈ ಪ್ರಶ್ನೆಯನ್ನು ನಾನು ಕಳೆದ ವರ್ಷ ಕೊಟ್ಟಿದ್ದು, ಕಳೆದ ವರ್ಷದ ಅಂದರೆ ೧೯೭೮-೭೯ನೇ ಸಾಲಿನ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈಗ ೧೯೭೯–೮೦ನೇ ಸಾಲಿನ ಅಂಕಿ ಅಂಶಗಳು ಇದೆಯೇ ಎಂದು ಕೇಳುತ್ತಿದ್ದೇನೆ.

Sri G.B. Shankar Rao.—The hon. Member Shri M. Srinivas has asked the information only for the year 1978-79; and I have fur nished the same. If he wants the information relating to the year 1979-80, I want another notice.

ಶ್ರೀ ಎಂ. ಶ್ರೀನಿವಾಸ್.—೧೯೮೦–೮೧ಕ್ಕೆ ಎಷ್ಟು ಅಪ್ಲಿಕೇಷನ್ಸ್ ಬಂದಿವೆ ಎನ್ನುತಕ್ಕ ಅಂಕಿ ಅಂಶ ಗಳು ಇದೆಯೇ ?

ಶ್ರೀ ಜಿ.ಬಿ. ಶಂಕರರಾವ್.—ತಾವು ಪ್ರಶ್ನೆಯಲ್ಲಿ ೧೯೭೮-೭೯ನೇ ಸಾಲಿನ ವಿಷಯವನ್ನು ಕೇಳಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ ಈಗ ೧೯೮೦–೮೧ನೇ ಸಾಲಿನ ವಿಚಾರವನ್ನು ಕೇಳುತ್ತಿದ್ದೀರಿ. ಅದನ್ನು ತರಿಸಿಕೊಂಡು ನೋಡಬೇಕು.

ಅಧ್ಯಕ್ಷರು.—ಮಾಹಿತಿ ಇದ್ದರೆ ಕೊಡಿ, ಇಲ್ಲದೇ ಹೋದರೆ ಏಕೆ ಸುಮ್ಮನೆ ಕಷ್ಟಪಡುತ್ತೀರಿ.

Sri G.B. Shankar Rao,—Mr. Speaker Sir, you must know our difficulty also. I cannot answer this type of questions off-hand. The hon. Member Sri M. Srinivas is asking for general information.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ನೇರವಾಗಿ ಉತ್ತರ ಕೊಡುವುದಿಲ್ಲ.

ಶ್ರೀ ಜಿ.ಬಿ. ಶಂಕರರಾವ್.—ಪ್ರಶ್ನೆ ೧೯೭೯–೮೦ನೇ ವರ್ಷಕ್ಕೆ ಸಂಬಂಧಪಟ್ಟಿದು. ಅದಕ್ಕೆ ಉತ್ತರ ಹೇಳಿದ್ದೇನೆ. ಆದರೆ ಈಗ ಪ್ರಶ್ನೆ ಕೇಳುತ್ತಿರುವುದು ೧೯೮೦-೮೧ನೇ ವರ್ಷಕ್ಕೆ ಸಂಬಂಧಪಟ್ಟಿದ್ದು. ಅದಕ್ಕೋಸ್ಕರ ಉತ್ತರ ತರಿಸಿ ನೋಡಬೇಕು ಎಂದು ಹೇಳಿದ್ದೇನೆ.

ಶ್ರೀ ಎಂ. ಶ್ರೀನಿವಾಸ.—ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮಜಾತಿಯವರು ನಡೆಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ '೩' ಎಂದು ಉತ್ತರ ಕೊಟ್ಟಿದ್ದೀರಿ. ಈ ಮೂರನ್ನು ಯಾವ ಸ್ಥಳಗಳಲ್ಲಿ ನಡೆಸುತ್ತಿದ್ದಾರೆ ಎಂದು ತಿಳಿಸುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಒಂದು ಬೀದರ್‌ನಲ್ಲಿದೆ, ಎರಡನೆಯದು ಭದ್ರಾವತಿಯಲ್ಲಿದೆ, ಮೂರನೆಯದು ಮತ್ತಿಕೆರೆಯಲ್ಲಿದೆ.

ಶ್ರೀ ಎಂ. ಶ್ರೀನಿವಾಸ.—ಬೆಂಗಳೂರಿನಲ್ಲಿ ಪ್ರೌಢಶಾಲೆಯನ್ನು ನಡೆಸುತ್ತಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಕಮಲಾನೆಹರೂ ಹೈಸ್ಕೂಲ್, ಎಕ್ಸ್‌ಟೆನ್‌ಷನ್, ಯಶವಂತಪುರ

ಶ್ರೀ ಶೇರ್‌ಖಾನ್.—ಉತ್ತರ (ಬಿ) ಯಲ್ಲಿ ಎಸ್ ಸಿ/ಎಸ್.ಟಿ. ಮ್ಯಾನೇಜ್‌ಮೆಂಟ್‌ನವರು ಹೈಸ್ಕೂಲು ರನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಎಜುಕೇಷನಲ್ ಪಾಲಿಸಿ ಪ್ರಕಾರ ಈಗ ಎಸ್.ಸಿ./ಎಸ್.ಟಿ.ಯವರಿಗೆ ಏನು ಅವಕಾಶ ಕೊಟ್ಟಿದೀರಿ, ಅದೇ ರೀತಿ ಮೈನಾರಿಟೀಸ್ ಕ್ಲಾಸಸ್ ಬಂದು ಕೇಳಿದರೆ ಅವಕಾಶ ಕೊಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಎಸ್.ಸಿ./ಎಸ್.ಟಿ.ಯವರು ಪ್ರೈವೇಟ್ ಮ್ಯಾನೇಜ್‌ಮೆಂಟ್ ಮಾಡಿಕೊಂಡು ನಡೆಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮೂರು ಕಡೆ ಎಂದು ಹೇಳಿದ್ದೇನೆ. ಇನ್ನು ಮುಂದೆ ಯಾರಾದರೂ ಆ ರೀತಿ ಮುಂದೆ ಬಂದು ಶಾಲೆ ನಡೆಸುತ್ತೇವೆಂದು ಹೇಳಿದರೆ ಅವರಿಗೂ ಸಹ ಪರ್ಮೀಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಇಲ್ಲಿಯವರೆಗೆ ಯಾರೂ ಮುಂದೆ ಬಂದಿಲ್ಲ.